# ಕರ್ನಾಟಕ ವಿಧಾನ ಪರಿಷತ್ತು

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು : ಶ್ರೀ ಬಿ. ಜಿ. ಪಾಟೀಲ್**

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 834**

**ಉತ್ತರಿಸಬೇಕಾದ ದಿನಾಂಕ : 20.09.2022**

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಗುಲಬರ್ಗಾ ಹಾಲು ಉತ್ಪಾದಕರ ಸಹಕಾರ ಒಕ್ಕೂಟ (ಗುಮುಲ್)ದಿಂದ ಪ್ರತಿ ದಿನ ಎಷ್ಟು ಲೀಟರ್ ಹಾಲು ಉತ್ಪಾದನೆಯಾಗುತ್ತಿದೆ; (ವಿವರ ನೀಡುವುದು)</td><td>ಗುಲಬರ್ಗಾ ಹಾಲು ಉತ್ಪಾದಕರ ಸಹಕಾರ ಒಕ್ಕೂಟ (ಗುಮುಲ್) ದಿಂದ ಆಗಸ್ಟ-2022ರ ವರದಿಯಂತೆ, ಪ್ರತಿ ದಿನ ಸರಾಸರಿ 52338 ಕೆ.ಜಿ. ಪ್ರಮಾಣದಷ್ಟು ಹಾಲು ಶೇಖರಣೆಯಾಗಿರುತ್ತದೆ. ವಿವರ ಈ ಕೆಳಕಂಡಂತಿರುತ್ತದೆ.
<table>
<tr><th>ಕ್ರ. ಸಂ.</th><th>ಜಿಲ್ಲೆ</th><th>ಆಗಸ್ಟ 2022ರ ಮಾಹೆಯಲ್ಲಿ ದಿನವಹಿ ಸರಾಸರಿ ಹಾಲು ಶೇಖರಣೆ (ಕೆ.ಜಿ.ಗಳಲ್ಲಿ)</th></tr>
<tr><td>1</td><td>ಕಲಬುರಗಿ</td><td>25554</td></tr>
<tr><td>2</td><td>ಬೀದರ್</td><td>25324</td></tr>
<tr><td>3</td><td>ಯಾದಗಿರಿ</td><td>1460</td></tr>
<tr><td></td><td>ಒಟ್ಟು</td><td>52338</td></tr>
</table>
</td></tr>
<tr><td>ಆ)</td><td>ಗುಮುಲ್ ಪುನಶ್ಚೇತನಕ್ಕೆ ಸರ್ಕಾರ ಯಾವುದಾದರೂ ವಿಶೇಷ ಯೋಜನೆಯನ್ನು ಸಿದ್ಧಪಡಿಸಿದೆಯೇ;<br>ಸಿದ್ಧಪಡಿಸಿದ್ದಲ್ಲಿ, ಸರ್ಕಾರ ಇದು ವರೆವಿಗೂ ಕೈಗೊಂಡ ಕ್ರಮಗಳೇನು; (ವಿವರ ನೀಡುವುದು)</td><td>ಕರ್ನಾಟಕ ಹಾಲು ಮಹಾಮಂಡಳ ವತಿಯಿಂದ ಉಪ ಸಮಿತಿ ರಚಿಸಿ, ಕಲಬುರಗಿ ಹಾಲು ಒಕ್ಕೂಟ ವ್ಯಾಪ್ತಿಯಲ್ಲಿ ಹಾಲು ಉತ್ಪಾದನೆ ಹೆಚ್ಚಳಕ್ಕೆ ಕ್ರಮವಿಡಲಾಗಿದೆ.<br><br>ರೂ.1.50ಕೋಟಿ ವೆಚ್ಚದಲ್ಲಿ ಮೂಲಭೂತ ಸೌಕರ್ಯ ಅಭಿವೃದ್ಧಿಗಾಗಿ ಕ್ರಮವಿಡಲಾಗಿದೆ.<br><br>ಒಕ್ಕೂಟ ವ್ಯಾಪ್ತಿಯಲ್ಲಿ ಶೇಖರಿಸಿದ ಹಾಲಿನಿಂದ ಮೌಲ್ಯವರ್ಧಿತ ಉತ್ಪನ್ನಗಳನ್ನು ಉತ್ಪಾದಿಸಿ, ಮಾರುಕಟ್ಟೆಗೆ ಬಿಡುಗಡೆ ಮಾಡಿ ಗಳಿಸಿದ ಆದಾಯದಿಂದ ಹಾಲು ಉತ್ಪಾದಕ ಸದಸ್ಯರಿಗೆ ದರವನ್ನು ಪಾವತಿಸಲಾಗುತ್ತಿದೆ.</td></tr>
<tr><td>ಇ)</td><td>ಈ ಮೇಲ್ಕಂಡ ಹಾಲು ಒಕ್ಕೂಟದಲ್ಲಿ ಹಾಲಿನ ಉತ್ಪಾದನೆ ಹೆಚ್ಚಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ? (ವಿವರ ನೀಡುವುದು)</td><td>ಕಲಬುರಗಿ-ಬೀದರ ಹಾಗೂ ಯಾದಗಿರ ಜಿಲ್ಲಾ ಹಾಲು ಒಕ್ಕೂಟದಲ್ಲಿ ಹಾಲು ಉತ್ಪಾದನೆಯನ್ನು ಹೆಚ್ಚಿಸಲು ಸರ್ಕಾರದ ವತಿಯಿಂದ ಕ್ಷೀರಧಾರೆ ಯೋಜನೆಯಡಿ ಉತ್ಪಾದಕರು ಉತ್ಪಾದಿಸಿದ ಪ್ರತಿ ಲೀಟರ್ ಗುಣಮಟ್ಟದ ಹಾಲಿಗೆ ರೂ.5/- ರಂತೆ ಪ್ರೋತ್ಸಾಹಧನ ನೀಡಲಾಗುತ್ತಿದೆ.<br><br>ಕರ್ನಾಟಕ ಹಾಲು ಮಹಾಮಂಡಳ ವತಿಯಿಂದ ಹಾಲು ಉತ್ಪಾದನೆ ಹೆಚ್ಚಳಕ್ಕೆ ಈ ಕೆಳಕಂಡ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ.</td></tr>
</table>

| | | |
|---|---|---|
| | | 1. ಕಲಬುರಗಿಯಲ್ಲಿ ತರಬೇತಿ ಕೇಂದ್ರ ಸ್ಥಾಪನೆ ಮಾಡಿ ಹಾಲು ಉತ್ಪಾದಕ ಸದಸ್ಯರಿಗೆ ಹೈನುಗಾರಿಕೆ ಬಗ್ಗೆ ತರಬೇತಿ ನೀಡಲಾಗುತ್ತಿದೆ.<br>2. ಪಶು ಆಹಾರ ಸಾಗಾಣಿಕೆಗೆ ರಿಯಾಯಿತಿಯನ್ನು ನೀಡಲಾಗುತ್ತಿದೆ.<br>3. ರಬ್ಬರ್ ಮ್ಯಾಟ್‌ಗಳನ್ನು ಹಾಲು ಉತ್ಪಾದಕ ಸದಸ್ಯರಿಗೆ ಶೇ.50 ರಷ್ಟು ಅನುದಾನದಲ್ಲಿ ಒದಗಿಸಲಾಗುತ್ತಿದೆ.<br>4. ಮೇವು ಕತ್ತರಿಸುವ ಯಂತ್ರಗಳನ್ನು ಹಾಲು ಉತ್ಪಾದಕ ಸದಸ್ಯರಿಗೆ ಶೇ.50 ರಷ್ಟು ಅನುದಾನದಲ್ಲಿ ಒದಗಿಸಲಾಗುತ್ತಿದೆ.<br>5. ಹಾಲು ಮತ್ತು ಹಾಲು ಉತ್ಪನ್ನಗಳ ಮಾರಾಟಕ್ಕಾಗಿ ಒಕ್ಕೂಟ ವ್ಯಾಪ್ತಿಯಲ್ಲಿ ಪಾರ್ಲರ್‌ಗಳ ಸ್ಥಾಪನೆಗೆ ಕ್ರಮವಿಡಲಾಗಿದ್ದು, ಗಳಿಸಿದ ಆದಾಯದಿಂದ ಹಾಲು ಉತ್ಪಾದಕರಿಗೆ ದರವನ್ನು ಪಾವತಿಸಲಾಗುತ್ತಿದೆ. |

**ಕಡತ ಸಂಖ್ಯೆ: ಸಿಒ 163 ಸಿಸಿಬಿ 2022**

**(ಎಸ್. ಟಿ. ಸೋಮಶೇಖರ್)**
**ಸಹಕಾರ ಸಚಿವರು.**